ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)
'ಉತ್ಕೃಷ್ಟತಾ ಅಂತಃಸಾಮರ್ಥ್ಯ ಉಳ್ಳ' ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

ಊಟಿರಸ್ತೆ, ಮೈಸೂರು-570 025, ಕರ್ನಾಟಕ

JSS COLLEGE OF ARTS, COMMERCE & SCIENCE, OOTY ROAD, MYSORE

H.H. Jagadguru Dr. Sri Shivarathri Rajendra Mahaswamiji 1916 2015 Centenary Celebrations

☎ 0821-2548236 & 2548380 Fax: 0821-2548238 E-mail: jssautonomous@gmail.com

ದಿನಾಂಕ : **21.09.2016**

ಪ್ರಕಟಣೆಯ ಕೃಪೆಗಾಗಿ

## ಭಾರತದ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಅಗ್ರಗಣ್ಯ ನಾಯಕರು ಡಾ. ಬಿ.ಆರ್. ಅಂಬೇಡ್ಕರ್

– ಡಾ. ನರೇಂದ್ರ ಜಾದವ್

ರಾಜ್ಯಸಭಾ ಸದಸ್ಯರು ಮತ್ತು ಭಾರತ ಯೋಜನಾ ಆಯೋಗದ ಮಾಜಿ ಸದಸ್ಯರು ಆದ ಡಾ. ನರೇಂದ್ರ ಜಾದವ್ ಅವರು ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಕಾಲೇಜಿನ ಸುವರ್ಣ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಮಾಲೆಯ ಹತ್ತನೆ ಉಪನ್ಯಾಸವಾಗಿ 'ರಾಷ್ಟ್ರನಿರ್ಮಾಣಕ್ಕೆ ಡಾ. ಅಂಬೇಡ್ಕರ್ ಅವರ ಕೊಡುಗೆ' ಎಂಬ ವಿಷಯ ಕುರಿತು ಉಪನ್ಯಾಸ ನೀಡಿದರು. ಅವರು "ಡಾ. ಬಿ.ಆರ್. ಅಂಬೇಡ್ಕರ್‌ರವರ 125ನೇ ವರ್ಷದ ಜನ್ಮದಿನಾಚರಣೆಯನ್ನು ನಾವು ಆಚರಿಸಿದರೂ ಅವರನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಅವರನ್ನು ಕೇವಲ ಅಸ್ಪಶ್ಯರ ಉದ್ಧಾರಕ, ಸಂವಿಧಾನದ ಶಿಲ್ಪಿ ಎಂದಷ್ಟೇ ಸೀಮಿತವಾದ ನೆಲೆಯಲ್ಲಿ ನೋಡುತ್ತಿದ್ದೇವೆ. ಆದರೆ ಅವರು ಭಾರತದ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಅಗ್ರಗಣ್ಯ ನಾಯಕರಲ್ಲಿ ಒಬ್ಬರಾಗಿದ್ದಾರೆ. ಕೇವಲ ಒಂದು ಸಮುದಾಯದ ನಾಯಕರಾಗಿ ಬಿಂಬಿಸಿಲ್ಪಟ್ಟಿರುವುದು ಸರಿಯಲ್ಲ. ಅಂದಿನ ಸಮಾಜದ ಬಗ್ಗೆ ಬಹುಮುಖ ಚಿಂತನೆಯನ್ನೊಳಗೊಂಡ ಇಪ್ಪತ್ತೆರಡಕ್ಕೂ ಅಧಿಕ ಬೃಹತ್ ಕೃತಿಗಳನ್ನು ಬರೆದಿದ್ದಾರೆ. ಅವರು ಸದಾ ಭಾರತದ ಸಾಮಾಜಿಕ ವ್ಯವಸ್ಥೆಯ ಬಗ್ಗೆಯೇ ಚಿಂತನಶೀಲರಾಗಿದ್ದರು. ಅವರು ಮರಣ ಹೊಂದುವ ಸಂದರ್ಭದಲ್ಲಿಯೂ ಆ ಕುರಿತಾದ ಹತ್ತು ಕೃತಿಗಳು ರಚನೆಯಲ್ಲಿದ್ದವು ಎಂಬುದೇ ಇದಕ್ಕೆ ಸಾಕ್ಷಿ" ಎಂದು ಹೇಳಿದರು.

ಮುಂದುವರೆದು ಮಾತನಾಡುತ್ತಾ "ಅವರು ಕೇವಲ ಸಮಾಜ ಸುಧಾರಕ ಮಾತ್ರವಲ್ಲ ಜ್ಞಾನಪಿಪಾಸುಗಳಾಗಿದ್ದರು. ಆ ಕಾರಣದಿಂದಲೇ ಅವರ ಅಧ್ಯಯನ ಬಹುಮುಖವಾಗಿತ್ತು. ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಕೈಗೊಂಡರು. ವಿವಿಧ ದೇಶಗಳ ಆರ್ಥಿಕ ವ್ಯವಸ್ಥೆ, ಕಾನೂನು, ಸಾಮಾಜಿಕ ಚಿಂತನೆ ಈ ಮೊದಲಾದವುಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದರು. ಅವರು ಡಾಕ್ಟರೇಟ್ ಪದವಿಗಾಗಿ ಮತ್ತು ಡಾಕ್ಟರ್ ಆಫ್ ಸೈನ್ಸ್‌ಗಾಗಿ ಸಲ್ಲಿಸಿದ ಪ್ರಬಂಧಗಳು ಅವರ ಪ್ರಬುದ್ಧ ಚಿಂತನೆಯ ಪ್ರತೀಕಗಳಾಗಿವೆ. ಆ ಕಾರಣದಿಂದಲೇ ಭಾರತದ ಅಂದಿನ ವ್ಯವಸ್ಥೆಯನ್ನು ವೈಜ್ಞಾನಿಕವಾಗಿ ನೋಡಲು ಅವರಿಗೆ ಸಾಧ್ಯವಾಯಿತು. ಡಾ. ಅಂಬೇಡ್ಕರ್ ಅವರು ಕೇವಲ ಪುಸ್ತಕದ ಹುಳುವಾಗಿರದೆ, ಓದಿನ ಜ್ಞಾನವನ್ನು ರಾಷ್ಟ್ರ ನಿರ್ಮಾಣಕ್ಕೆ ವಿನಿಯೋಗಿಸಿದರು. ಎಲ್ಲಾ ಧರ್ಮವನ್ನು ಅಧ್ಯಯನ ಮಾಡಿ ಹಿಂದೂ ಧರ್ಮದ ಸುಧಾರಣೆಗಾಗಿ ಶ್ರಮಿಸಿದರು. ಅದು ಸಾಧ್ಯವಾಗದೆ ಹೋದಾಗ, ಅಸ್ಪಶ್ಯತೆಯ ನಿವಾರಣೆಗಾಗಿ ಹೋರಾಟಕ್ಕಿಳಿಯಬೇಕಾಯಿತು. ಈ ವಿಷಯದಲ್ಲಿಯೇ ಅಂಬೇಡ್ಕರ್ ಮತ್ತು ಗಾಂಧೀಜಿಯವರ ನಡುವೆ ಭಿನ್ನಭಿಪ್ರಾಯಗಳು ತಲೆದೋರಿದವು. ಆದರೆ ಇಬ್ಬರೂ ರಾಷ್ಟ್ರ ನಿರ್ಮಾಣಕ್ಕಾಗಿ ಶ್ರಮಿಸಿದರು. ಇಂದು ಶ್ರಮಿಕ ವರ್ಗ ಪಡೆಯುತ್ತಿರುವ ಹಲವಾರು ಸವಲತ್ತುಗಳಿಗೆ ಅಂಬೇಡ್ಕರ್ ಅವರ ಚಿಂತನೆಗಳು ಮತ್ತು ಆ ಕಾಲದಲ್ಲಿಯೇ ಅವರು ತಂದ ಆ ಬಗೆಗಿನ ಸುಧಾರಣೆಗಳು ಕಾರಣವಾಗಿವೆ. ಈ ಕಾರಣದಿಂದಾಗಿಯೇ ಅಂಬೇಡ್ಕರ್ ರಾಷ್ಟ್ರನಾಯಕರಾಗಿ ನಮ್ಮ ಮುಂದೆ ನಿಲ್ಲುತ್ತಾರೆ" ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಜೆಸ್ಕಾಂನ ನಿರ್ದೇಶಕರಾದ ಶ್ರೀ ಕಿರಣ್‌ಕುಮಾರ್ ಅವರು ಅಂಬೇಡ್ಕರ್ ಅವರ ಮೂಲಚಿಂತನೆಗಳಾದ ಶಿಕ್ಷಣ, ಸಂಘಟನೆ ಮತ್ತು ಹೋರಾಟ ರಾಷ್ಟ್ರ ನಿರ್ಮಾಣಕ್ಕೆ ಪೂರಕವಾದವು ಎಂದು ಹೇಳಿದರು.

ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಸ್ವಾಗತಿಸಿದರು. ಪ್ರಾಂಶುಪಾಲರಾದ ಪ್ರೊ.ಎಂ.ಮಹದೇವಪ್ಪನವರು ವಂದಿಸಿದರು. ಸುವರ್ಣ ಮಹೋತ್ಸವ ಸಮಿತಿಯ ಕಾರ್ಯದರ್ಶಿಗಳಾದ ಪ್ರೊ.ಡಿ.ಎಸ್. ಸದಾಶಿವಮೂರ್ತಿ ಅವರು ನಿರೂಪಿಸಿದರು. ಶ್ರೀ ಪರಶಿವಮೂರ್ತಿ, ಶ್ರೀ ರಂಗಪ್ಪ, ಶ್ರೀ ವೆಂಕಟರಮಣಜಿ, ಡಾ. ಎಂ. ಮಹದೇವ್ ಉಪಸ್ಥಿತರಿದ್ದರು.

ಗೆ,

ಸಂಪಾದಕರು

____________________

____________________

ಪ್ರಾಂಶುಪಾಲರು
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಊಟಿ ರಸ್ತೆ, ಮೈಸೂರು-25